**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.NDPS.8/2022**

ಸಾಕ್ಷಿದಾರರ ಹೆಸರು : ರಮೇಶ ಬಿ.

ತಂದೆಯ ಹೆಸರು : ಬಸವರಾಜಪ್ಪ

ವಯಸ್ಸು : 42 ವರ್ಷ

ಉದ್ಯೋಗ : ಅಬಕಾರಿ ಉಪ ನಿರೀಕ್ಷಕರು ಬೆಂಗಳೂರು

ವಾಸ ಸ್ಥಳ : ಬೆಂಗಳೂರು

ಪಿ.ಡಬ್ಲ್ಯೂ 4

ಸಿ.ಡಬ್ಲ್ಯೂ 6

ದಿ: 26-03-20026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಸತೀಶ್ ಕೆ.)**:

1. ಈ ಪ್ರಕರಣದಲ್ಲಿ ದಿಃ 30-03-2022 ರಂದು ಚಾಸಾ-1 ರವರಿಗೆ ಅಕ್ರಮವಾಗಿ ಗಾಂಜಾ ಗಿಡವನ್ನು ಬೆಳೆದಿರುವ ಬಗ್ಗೆ ಮಾಹಿತಿ ಬಂದಿತ್ತು. ಆ ವಿಷಯವನ್ನು ನಮಗೆ ತಿಳಿಸಿ ಅವರೊಂದಿಗೆ, ಇತರ ಸಿಬ್ಬಂದಿಗಳಾದ ಚಾಸಾ-5, ಚಾಸಾ-2 ಮತ್ತು 3 ರವರೊಂದಿಗೆ ಮತ್ತು ಇನ್ನೊಬ್ಬ ಸಾಕ್ಷಿಯಾದ ರಂಗಪ್ಪ (ಈ ಸಾಕ್ಷಿದಾರರಿಗೆ ದೋಷಾರೋಪಣ ಪತ್ರದಲ್ಲಿ ಕ್ರಮ ಸಂಖ್ಯೆ ನೀಡಿರುವುದಿಲ್ಲ.) ಚಾಸಾ-4 ರವರೊಂದಿಗೆ ಸರ್ಕಾರಿ ವಾಹನ ಕೆ. ಎ. 17 ಜಿ. 521 ದಲ್ಲಿ ನ್ಯಾಮತಿ ತಾಲ್ಲೂಕಿನ ಯರಗನಾಳ ಗ್ರಾಮ ಪಂಚಾಯಿತಿಯ ಕುದುರೆಕೊಂಡ ಗ್ರಾಮಕ್ಕೆ ಸರ್ವೇ ನಂಬರ 12/11 ರ ಅಡಿಕೆ ತೋಟಕ್ಕೆ ಹೋದೆವು. ಸ್ಥಳದಲ್ಲಿ ಇದ್ದ ಗ್ರಾಮಸ್ಥ,ರಿಗೆ ಬಂದಂತಹ ಮಾಹಿತಿಯನ್ನು ತಿಳಿಸಿದೆವು ಮತ್ತು ಪಂಚರಾಗಿ ಸಹಕರಿಸಲು ಕೇಳಿದೆವು. ಅವರು

ನಿರಾಕರಿಸಿದರು. ಆದ್ದರಿಂದ ನಮ್ಮೊಂದಿಗೆ ಇದ್ದ ಚಾಸಾ-2, 3 ಮತ್ತು ಸಾಕ್ಷಿ ರಂಗಪ್ಪರವರನ್ನು ಪಂಚರಾಗಿ ಸಹಕರಿಸಲು ಹೇಳಿದೆವು. ಅದಕ್ಕೆ ಅವರು ಒಪ್ಪಿರುತ್ತಾರೆ. ಆ ತೋಟದ ಮಧ್ಯಭಾಗದಿಂದ ಪೂರ್ವದ ಅಂಚಿನಲ್ಲಿ ಎರಡು ಗಿಡಗಳು ಇದ್ದು, ಹೋಗಿ ನೋಡಿದಾಗ ಅದರ ಎಲೆಯನ್ನು ಕಿತ್ತಿ ನೋಡಿದಾಗ, ಅವರ ವಾಸನೆಯಿಂದ ಮತ್ತು ಅದರ ಆಕಾರದಿಂದ ಅದು ಗಾಂಜಾ ಗಿಡ ಅಂತ ಗೊತ್ತಾಯಿತು. ನಂತರ ಈ ವಿಷಯವನ್ನು ಪಂಚರಿಗೆ ತಿಳಿಸಿದೆವು. ಆ ಗಿಡಗಳನ್ನು ಬೇರು ಸಮೇತ ಕಿತ್ತಿದೆವು. ಅದನ್ನು ಟೇಪ್ ನಿಂದ ಅಳತೆ ಮಾಡಿದಾಗ ಅದು 03 ಅಡಿ ಇತ್ತು ಮತ್ತು ಅದನ್ನು ತೂಕ ಮಾಡಿದಾಗ 134 ಗ್ರಾಂ. ತೂಕ ಇತ್ತು. ನಂತರ ಚಾಸಾ-2 ರವರನ್ನು ಆ ತೋಟದ ಬಗ್ಗೆ ವಿಚಾರಿಸಿದಾಗ ಸದರಿ ಜಮೀನು ಲಕ್ಷ್ಮಪ್ಪ ಅಂತ ತಿಳಿಸಿದರು. ಆ ವ್ಯಕ್ತಿ ಎಲ್ಲಿ ಇರುವುದಾಗಿ ಕೇಳಿದಾಗ ಅವರು ಕೆಲಸದ ನಿಮಿತ್ಯ ಹೋಗಿದ್ದಾರೆ ಅಂತ ತಿಳಿಸಿದರು. (ಗೈರು ಹಾಜರು ಇರುವ ಆರೋಪಿಯನ್ನು ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಅಂತ ನುಡಿದಿರುತ್ತಾರೆ.) ಒಂದು ಬಿಳಿ ಬಟ್ಟೆಯಿಂದ ಆ ಗಾಂಜಾ ಗಿಡಗಳನ್ನು ಕಟ್ಟಿ ಸೀಲ್ ಮಾಡಿ, ಮಾದರಿ ಚೀಟಿಯನ್ನು ತಯಾರಿಸಿ, ಅದಕ್ಕೆ ಪಂಚರ ಸಹಿ ಪಡೆದುಕೊಂಡು ಸದರಿ ಚೀಲಕ್ಕೆ ಅಂಟಿಸಿದೆವು. ಮಹಜರ ಕ್ರಮವನ್ನು ಮಧ್ಯಾಹ್ನ 12.15 ರಿಂದ 1.45 ಗಂಟೆಯವರೆಗೆ ಜರುಗಿಸಿದರು. ಆ ಮಹಜರನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ಮಹಜರನ್ನು ಈಗಾಗಲೇ ನಿಪಿ-8 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-8(ಡಿ) ಅಂತ ಗುರುತಿಸಲಾಯಿತು. ಆ ಸಮಯದಲ್ಲಿ ನಾನು ಈಗ ನೋಡಿದ ಪೋಟೋಗಳನ್ನು ತೆಗೆದಿರುತ್ತಾರೆ. ಆ ಪೋಟೋಗಳನ್ನು ಈಗಾಗಲೇ ನಿಪಿ-9 ರಿಂದ 12 ಅಂತ ಗುರುತಿಸಲಾಗಿದೆ.

2. ನ್ಯಾಯಾಧೀಶರ ಸಮಕ್ಷಮ ಇನ್ವೆಂಟರಿ ಮಾಡಲು ನಾನು ಸಹಕರಿಸಿರುತ್ತೇನೆ. ಆ ಇನ್ವೆಂಟರಿ ಮಾಡುವ ಕಾಲಕ್ಕೆ 04 ಪೋಟೋಗಳನ್ನು ತೆಗೆದಿರುತ್ತಾರೆ. ಆ ಪೋಟೋಗಳನ್ನು ಈಗಾಗಲೇ ನಿಪಿ-17 ರಿಂದ 20 ಅಂತ ಗುರುತಿಸಲಾಗಿದೆ. ಇನ್ವಂಟರಿ ಸಮಯದಲ್ಲಿ ತೆಗೆದ ಮಾದರಿ ಸ್ಯಾಂಪಲ್ ನ್ನು ಈಗ

ನೋಡಿ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು.ಮಾ.1 ಅಂತ ಗುರುತಿಸಲಾಗಿದೆ. ಮು.ಮಾ.1 ನ್ನು RFSL ಬೆಂಗಳೂರು ಇವರಿಗೆ ಹಾಜರುಪಡಿಸಿ, ವರದಿಯನ್ನು ಪಡೆದು ಮೇಲಾಧಿಕಾರಿಗಳಿಗೆ ಕೊಟ್ಟಿರುತ್ತೇನೆ. ದಿಃ 26-04-2022 ರಂದು ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. FSL ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-26 ಅಂತ ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ.ಕೆ.ಹೆಚ್., ವಕೀಲರಿಂದ ಆರೋಪಿತರ ಪರವಾಗಿ**:

3. ದಿಃ 30-03-2022 ರಂದು ಮೇಲಾಧಿಕಾರಿಗಳಿಗೆ ಮಾಹಿತಿ ಬಂದಾಗ ಬೆಳಿಗ್ಗೆ 11.00 ಗಂಟೆ ಆಗಿತ್ತು. ನನಗೆ ಮಾಹಿತಿ ತಿಳಿಸಿದಾಗ ಬೆಳಿಗ್ಗೆ 11.30 ಗಂಟೆ ಆಗಿತ್ತು. ಆಗ ನಾನು ಕಛೇರಿಯಲ್ಲಿದ್ದೆ. ಕಛೇರಿಯಲ್ಲಿ ನಾನು, ಚಾಸಾ-1, 5 ರವರು ಮತ್ತು ಚಾಲಕ ಇದ್ದರು. ಆ ಸ್ಥಳಕ್ಕೆ ನಾವು ಯಾವ ಮಾರ್ಗವಾಗಿ ಹೋಗಿದ್ದೆವು ಅಂತ ನನಗೆ ನೆನಪಿಲ್ಲ. ಕಛೇರಿಯನ್ನು ಬಿಟ್ಟಾಗ ಬೆಳಿಗ್ಗೆ 11.30 ಗಂಟೆ ಆಗಿತ್ತು. ಮೊದಲು ನಾವು ಕುದುರೆಕೊಂಡ ಗ್ರಾಮದ ಸರ್ವೇ ನಂಬರಗೆ ಹೋದೆವು. ಅದೇ ಸರ್ವೇ ನಂಬರ ಅಂತ ನಮಗೆ ಇನ್ಸಪೆಕ್ಟರ್ ರವರು ಹೇಳಿದರು. ಪಂಚರನ್ನು ಇನ್ಸಪೆಕ್ಟರ್ ರವರು ಪೊನ್ ಮಾಡಿ ಕರೆಸಿದ್ದರು. ಆಗ ಎಷ್ಟು ಗಂಟೆ ಆಗಿತ್ತು ಅಂತ ನನಗೆ ಗೊತ್ತಿಲ್ಲ. ಪಂಚರು ಇಬ್ಬರು ನಮ್ಮ ಜೊತೆ ಬಂದರು.

4. ಕುದುರಕೊಂಡ ಗ್ರಾಮದ ಯಾವ ದಿಕ್ಕಿನಲ್ಲಿ ಆ ಜಮೀನು ಇತ್ತು ಅಂತ ನನಗೆ ಗೊತ್ತಿಲ್ಲ. ಆ ತೋಟದಲ್ಲಿ ಯಾರು ಸ್ಥಳೀಯರು ಇರಲಿಲ್ಲ ಅಂದರೆ ಸರಿಯಲ್ಲ. ಆ ತೋಟದಲ್ಲಿತನಿಖೆಯನ್ನು ಯಾವ ದಿಕ್ಕಿನಿಂದ ಪ್ರಾರಂಭಿಸಿದೆವು ಅಂತ ನೆನಪಿಲ್ಲ. ತೋಟದಲ್ಲಿ 10-15 ನಿಮಿಷ ಹುಡುಕಾಡಿದೆವು. ಇನ್ಸಪೆಕ್ಟರ್ ರವರು ಆ ಗಿಡಗಳನ್ನು ನೋಡಿದರು. 10-15 ಅಡಿ ದೂರದಲ್ಲಿ ಅದನ್ನು ನೋಡಿದೆವು. ಆಗ ನಾನು ಪಿ.ಐ. ಜೊತೆ ಇದ್ದೆ. ನಾನು ಅಷ್ಟೆ ಅಡಿ ಅಂತರದ ದೂರದಲ್ಲಿ ನೋಡಿದೆ. ಗಿಡಗಳು ಎಷ್ಟು ಅಂತರದಲ್ಲಿ ಇತ್ತು ಅಂದರೆ ಎರಡು ಅಕ್ಕಪಕ್ಕದಲ್ಲಿ ಇದ್ದವು. ಆ ತೋಟದ ವಿಸ್ತೀರ್ಣ ನನಗೆ ಹೇಳಲು ಆಗುವುದಿಲ್ಲ. ಇನ್ಸಪೆಕ್ಟರ್ ರವರ ಆದೇಶದ ಮೇರೆಗೆ ನಾನು ಮತ್ತು ಸಬ್ ಇನ್ಸಪೆಕ್ಟರ್ ರವರು ಪಂಚರ

ಸಮಕ್ಷಮ ಆ ಗಿಡಗಳನ್ನು ಬೇರು ಸಮೇತ ಕಿತ್ತಿದೆವು. ತೂಕ ಮಾಡುವ ಕಾಲಕ್ಕೆ ಗಿಡದ ಬೇರು, ಬೀಜ, ಪರಾಗ(Petals), ಕಾಂಡವನ್ನು ಬೇರ್ಪಡಿಸಿಲ್ಲ. ಆ ಜಾಗದ ಚಕ್ಕುಬಂದಿ ಅಂದರೆ ಪೂರ್ವಕ್ಕೆ ಗದುಗೆಪ್ಪ ಬಿನ್ ಗಿರಿ ಮಂಜಪ್ಪರವರ ಜಮೀನು, ಪಶ್ಚಿಮಕ್ಕೆ ಚಂದ್ರಪ್ಪ ಬಿನ್ ಗಿರಿಯಪ್ಪರವರ ಜಮೀನು, ಉತ್ತರಕ್ಕೆ ಗಿರಿಯಪ್ಪರವರ ಜಮೀನು ಮತ್ತು ದಕ್ಷಿಣಕ್ಕೆ ಹಳ್ಳ ಇರುತ್ತದೆ. ಇದು ಪೂರ್ಣ ಜಮೀನಿನ ಚಕ್ಕುಬಂದಿ ಇರುತ್ತದೆ. ಗುನ್ನಾ ಸ್ಥಳದ ಚಕ್ಕುಬಂದಿ ಹೇಳಲು ಬರುವುದಿಲ್ಲ. ಈಗ ತೋರಿಸಿದ ನಿಪಿ-8 ರಲ್ಲಿ ಪ್ರತಿ ಪುಟದಲ್ಲಿ ನನ್ನ ಸಹಿ ಇರುವುದಿಲ್ಲ ಅಂದರೆ ಕೊನೆಯ ಪುಟದಲ್ಲಿ ಇದೆ. ಆ ಮಹಜರನ್ನು ನಿರೀಕ್ಷಕರು ಬರೆದರು. ನಿರೀಕ್ಷರ ಬರವಣಿಗೆ ಅದು ಇರುವುದಿಲ್ಲ ಅಂದರೆ ಸುಳ್ಳು. ಮಹಜರಗೆ ನಾನು ಐದನೇಯವನಾಗಿ ಸಹಿ ಮಾಡಿದ್ದೇನೆ. ಮೊದಲು ಪಂಚರಾದ ಚಾಸಾ-2 ರವರು, ನಂತರ ಚಾಸಾ-3 ರವರು, ಆನಂತರ ರಂಗಪ್ಪರವರು, ಚಾಸಾ-5 ರವರು ಸಹಿ ಮಾಡಿದ ನಂತರ ನಾನು ಸಹಿ ಮಾಡಿರುತ್ತೇವೆ. ಪಂಚನಾಮೆ ಮಾಡಿದ ನಂತರ ಮುದ್ದೆ ಮಾಲನ್ನು ನಾವೆಲ್ಲರೂ ಸೇರಿ ಅಮಾನತ್ತು ಮಾಡಿಕೊಂಡೆವು.

5. ನಿಪಿ-11 ರ ಪೋಟೋದಲ್ಲಿ ನಾನು ಇರುವುದಿಲ್ಲ. ಆ ಪೋಟೋವನ್ನು ದೊಡ್ಡೆತ್ತಿನಹಳ್ಳಿಯ ವಿರುಪಾಕ್ಷಪ್ಪ ಎಂಬುವವರು ತೆಗೆದರು. ಅಬಕಾರಿ ಕಛೇರಿಯು ಹೊನ್ನಾಳಿ ಕೆ.ಎಸ್.ಆರ್.ಟಿ. ಬಸ್ ನಿಲ್ದಾಣದ ಪಕ್ಕದಲ್ಲಿ ಇರುತ್ತದೆ. ಅಲ್ಲಿಂದ ಹೊನ್ನಾಳಿ ನ್ಯಾಯಾಲಯ 02 ಕಿ.ಮೀ. ದೂರದಲ್ಲಿದೆ. ನ್ಯಾಯಾಲಯವು 01 ಕಿ.ಮೀ. ಒಳಗಡೆ ಇದೆ ಅಂದರೆ ಸರಿಯಲ್ಲ. ಶೋಧನಾ ವಾರೆಂಟ್ ನ್ನು ಇನ್ಸಪೆಕ್ಟರ್ ರವರು ಪಂಚರ ಸಮಕ್ಷಮ ತಯಾರಿಸಿದರು. ಇನ್ವೆಂಟರಿ ಮಾಡಿದ ದಿನಾಂಕ ನೆನಪಿಲ್ಲ. ಘಟನೆ ನಡೆದ ಒಂದು ವಾರದ ನಂತರ 3 ನೇ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಮಾಡಿರುತ್ತೇವೆ. ನಿಪಿ-17 ರಿಂದ 19 ರಲ್ಲಿ ನಾನು ಇಲ್ಲ. ಸಾಕ್ಷಿದಾರರು ಹೇಳುತ್ತಾರೆ ನಿಪಿ-20 ರಲ್ಲಿ ನಾನು ಇದ್ದೇನೆ.

6. ದಿಃ 05-04-2022 ರಂದು FSL ಇಲಾಖೆಗೆ ಕೊಡಲು ಹೋಗಿದ್ದೆ. ಚಾಸಾ-1 ರವರು ನನ್ನನ್ನು FSL ಇಲಾಖೆಗೆ ಕಳುಹಿಸಿದ್ದರು. ಚಾಸಾ-1 ರವರು ನನಗೆ ಮೇಲೆ ಹೇಳಿದಂತೆ FSL ಗೆ ಕಳುಹಿಸಿಲ್ಲ

ಅಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ನಿಪಿ-26ರಲ್ಲಿ ವಸ್ತುಗಳ ವಿವರದಲ್ಲಿ ಗಾಂಜಾ ಅಂತ ಇದೆ ಅಂದರೆ ನಿಜ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಅಂದರೆ ಸರಿಯಲ್ಲ. ಪಿ.ಐ. ರವರು ಸ್ಥಳದಲ್ಲಿ ಮಹಜರ ಮಾಡಿಲ್ಲ ಅಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.